


## ಕ್ರಿಕೆಟ್ ಮೇನಿಯಾ

ಭಾರತದಲ್ಲಿ ಕ್ರಿಕೆಟ್ ಕೇವಲ ಆಟವಲ್ಲ, ಅಭಿಮಾನಿಗಳಿಗೆ ಅದೊಂದು ಭಾವನೆ ಮತ್ತು ಹಬ್ಬ. ಈಗಂತೂ 'ಇಂಡಿಯನ್ ಪ್ರೀಮಿಯರ್ ಲೀಗ್' ಹಬ್ಬವನ್ನು ಜನ ಕಣ್ತುಂಬಿಕೊಳ್ಳುತ್ತಿದ್ದಾರೆ. ಕೆಲ ವರ್ಷಗಳ ಹಿಂದೆ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ವತಿಯಿಂದ ಆಯೋಜಿಸಿದ್ದ 'ಕ್ರಿಕೆಟ್ ಮೇನಿಯಾ' ಈ ಐಪಿಎಲ್ ನೆನಪಿಸುತ್ತದೆ.

ರಾಜ್ಯದ ಉದ್ದಗಲಕ್ಕೂ ಇರುವ ತನ್ನ ಓದುಗರಿಗಾಗಿ ಹಾಗೂ ಕ್ರೀಡಾ ಪ್ರೇಮಿಗಳಿಗೆ ಪತ್ರಿಕೆಯು ಪ್ರಶ್ನೆಗಳನ್ನು ಕೇಳುವ ಮೂಲಕ ಈ ಸ್ಪರ್ಧೆಯನ್ನು ಆಯೋಜಿಸಿತ್ತು. ಪಂದ್ಯಾವಳಿಗಳ ಸಮಯದಲ್ಲಿ, ವಿಶೇಷವಾಗಿ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸಂದರ್ಭದಲ್ಲಿ ದೇಶಾದ್ಯಂತ ಕಂಡುಬರುವ ಕ್ರಿಕೆಟ್ ಅಭಿಮಾನಕ್ಕೆ ಪೂರಕವಾಗಿ ಈ ಸ್ಪರ್ಧೆಯು ಕೂಡಿರುತ್ತಿತ್ತು.

ಕ್ರಿಕೆಟ್‌ಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು **(Preditct and Win Contest)** ಓದುಗರು ಬರೆದು, ಪತ್ರಿಕಾ ಕಚೇರಿಯ ಬಾಕ್ಸ್‌ನಲ್ಲಿ ಪ್ರತಿ ವಾರವೂ ಹಾಕಬೇಕಿತ್ತು. ಪಂದ್ಯಾವಳಿಯ ಕೊನೆಯಲ್ಲಿ 'ಕ್ರಿಕೆಟ್ ಮೇನಿಯಾ' ಸ್ಪರ್ಧೆಯ ವಿಜೇತರಿಗೆ ಆಕರ್ಷಕ ಬಹುಮಾನವನ್ನು ಕೊಡುತ್ತಿದ್ದರು. 2007ರಲ್ಲಿ ವಿಶ್ವಕಪ್ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಸೂಪರ್ 8 ಹಂತದ ಸ್ಪರ್ಧೆಯಲ್ಲಿ ನನಗೆ ಪ್ರಥಮ ಬಹುಮಾನವಾಗಿ ಸ್ಯಾಮ್‌ಸಂಗ್ ಕಲರ್ ಟಿವಿ ಸಿಕ್ಕಿತ್ತು. ಅವೆಲ್ಲವೂ ಈಗ ನೆನಪು ಅಷ್ಟೇ.

–ರಘುನಾಥರಾವ್ ರಾವ್ ತಾಪ್ಸೆ, ದಾವಣಗೆರೆ

## ತ್ಯಾಜ್ಯ ತಪ್ಪಿಸುವ ಉಪಾಯ

ಮಂಡ್ಯ ನಗರದ ಬನ್ನೂರು ರಸ್ತೆ ಬದಿಯಲ್ಲಿ (ಮರೀಗೌಡ ಬಡಾವಣೆ ಮುಂಭಾಗ) ನಾಗರೀಕರು ತಮ್ಮ ಮನೆಯ ಕಸ, ಹಸಿ ಕಸ, ಪ್ಲಾಸ್ಟಿಕ್ ತ್ಯಾಜ್ಯವನ್ನು ಚಿತ್ರದಲ್ಲಿ ಕಾಣುತ್ತಿರುವ ಜಾಗದಲ್ಲಿ ಬೇಕಾಬಿಟ್ಟಿ ಬಿಸಾಡುತ್ತಿದ್ದರು. ನಾಯಿಗಳು ಅದನ್ನು ಕೆದಕಿ ಕೆದಕಿ ಗಲೀಜು ಮಾಡುತ್ತಿದ್ದವು. ಜೊತೆಗೆ ಕೊಳೆತ ತ್ಯಾಜ್ಯ ದುರ್ವಾಸನೆ ಬೀರುತ್ತಿತ್ತು. ರಸ್ತೆಯಲ್ಲಿ ಸಂಚರಿಸುವ ನಾಗರಿಕರು ಮೂಗು ಮುಚ್ಚಿಕೊಂಡು ನಡೆದು ಹೋಗುವಂತಿತ್ತು. ಇದನ್ನು ಕಂಡ ಯಾರೋ ಆ ಸ್ಥಳವನ್ನು ಸ್ವಚ್ಛಗೊಳಿಸಿ, ಅದೇ ಜಾಗದಲ್ಲಿ ಸಿಮೆಂಟ್ ಇಟ್ಟಿಗೆಗಳನ್ನು ವೃತ್ತಾಕಾರವಾಗಿ ಜೋಡಿಸಿದ್ದಾರೆ. ಇಲ್ಲಿ ಕಸ ಬಿಸಾಡದಿರಲೆಂದು ಆ ವೃತ್ತದ ನಡುವೆ ಪಕ್ಷಿಯ ಪ್ರತಿಕೃತಿ ಇಟ್ಟಿದ್ದಾರೆ. ಈಗ ಆ ಸ್ಥಳದಲ್ಲಿ ಯಾವುದೇ ರೀತಿಯ ಕಸವನ್ನು ನಾಗರಿಕರು ಹಾಕುತ್ತಿಲ್ಲ. ಇದ್ದ ದುರ್ವಾಸನೆಯ ಸಮಸ್ಯೆಯೂ ಬಗೆಹರಿದಂತಾಗಿದೆ.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ





## ಮನಸೆಳೆವ ಚಿಟ್ಟೆಹುಳು

ಈ ಚಿತ್ರದಲ್ಲಿರುವುದು ಆಗೊಮ್ಮೆ ಈಗೊಮ್ಮೆ ನಮ್ಮ ಸುತ್ತ ಕಾಣಸಿಗುವ ಗ್ರೀನ್ ಟಸ್ಸಾಕ್ ಮಾತ್ ಕ್ಯಾಟರ್‌ಪಿಲ್ಲರ್ **(Green Tussock Moth Caterpillar)**. ಅಂದರೆ ಕಂಬಳಿಹುಳ ಅಥವಾ ಚಿಟ್ಟೆಹುಳು. ಇದು ಚಿಟ್ಟೆ **(Butterfly)** ಅಥವಾ ಪತಂಗದ **(Moth)** ಜೀವನಚಕ್ರದ ಲಾರ್ವಾ ಹಂತವಾಗಿದೆ. ಎಲೆಗಳನ್ನು ತಿಂದು ಬೆಳೆಯುವ ಮೃದುವಾದ ದೇಹವನ್ನು ಹೊಂದಿರುವ ಈ ಹಂತದಲ್ಲಿ ಹೆಚ್ಚು ಆಹಾರವನ್ನು ಸೇವಿಸುತ್ತದೆ. ಬಹಳ ಬೇಗನೇ ಬೆಳೆಯುವ ಇದರ ದೇಹ ಹಸಿರು ಬಣ್ಣದಲ್ಲಿದ್ದು, ಮೇಲೆ ಮೃದುವಾದ ರೋಮಗಳಂತಿರುವ ತುಪ್ಪಳ **(tussock)** ಕಂಡುಬರುತ್ತದೆ. ಈ ರೋಮ ಕೇವಲ ಆಲಂಕಾರಿಕವಾಗಿರದೆ, ಶತ್ರುಗಳಿಂದ ರಕ್ಷಣೆ ಪಡೆಯಲೂ ಸಹಾಯವನ್ನು ಮಾಡುತ್ತದೆ.

–ಡಾ. ಮೈತ್ರಿ ಭಟ್, ವಿಟ್ಲ